ತಾವರೆಯ ಎಲೆಯ ಮೇಲೆ ನೀರಿನ ಹನಿಗಳು ನಿಲ್ಲುವುದಿಲ್ಲ. ಎಲೆಗಳನ್ನು ನೆನೆಸುವುದೂ ಇಲ್ಲ. ಇಂಥ ಕಲೆ ನಾಗಣ್ಣನಿಗೆ ಮಾತ್ರ ಕರಗತವಾಗಿತ್ತು.

★★★

ಎರಡು ಮೂರು ದಿನಗಳು ಉರುಳಿದರೂ ಈ ಶೂನ್ಯ ಕಡಿಮೆ ಆಗಲೇ ಇಲ್ಲ.

ನಾನು ಎಲ್ಲದರಲ್ಲೂ ಬುದ್ಧಿವಂತ, ಆದರೆ ಯಾವುದರಲ್ಲೂ ಇಲ್ಲ. ಅದ್ಭುತ ಮಾತುಗಾರ. ಮಾತಿಗೆ ಅರ್ಥವೇ ಇರಲಿಲ್ಲ. ಪ್ರಚಂಡ ಪ್ರೇಮಿ. ಪ್ರೇಮದ ಮಾತುಗಳ ಪಿಸುಗುಡುವಿಕೆಯೂ ನನಗೆ ಕೇಳಲಿಲ್ಲ.

ನಮ್ಮ ಹಾಗೇ, ನಮ್ಮ ಜೊತೆಯೇ ಇದ್ದ ನಾಗಣ್ಣ, ನನ್ನಷ್ಟು ಓದಲಿಲ್ಲ. ಆದರೆ ಓದಿಗೂ ಮೀರಿದ್ದ. ಏನೂ ಗೊತ್ತಾಗುವುದಿಲ್ಲ ಎಂದು ನಾನು ಭಾವಿಸಿದ್ದೆ. ಆದರೆ ಅವನ ಅಂತರ್ಯ ಎಲ್ಲವನ್ನೂ ಗ್ರಹಿಸಬಲ್ಲದಾಗಿತ್ತು. ಅವನ ದೊಡ್ಡ ಆಸ್ತಿ ಎಂದರೆ, ಸಂಬಂಧಗಳ ಬಗ್ಗೆ ಅವನಿಗಿದ್ದ ಬೆರಗು, ಮೋಹ ಒಂದಿನಿತೂ ಕಡಿಮೆಯಾಗಲೇ ಇಲ್ಲ. ನನ್ನ ಸ್ವೀಕೃತಿಯ ಶಕ್ತಿ ಮಾತ್ರ ದಿನಗಳೆದಂತೆ ಕುಸಿಯುತ್ತಲೇ ಇತ್ತು. ನಿರ್ಲಿಪ್ತ, ನಿರ್ವಿಕಾರ ಎಂದರೆ ಹೀಗೆಯೇ ಇರಬಹುದೆ? ಅದಕ್ಕೆಂದೇ ನಿರ್ಮಲ ಹೃದಯದಿಂದ ದೇವರು, ಮನುಷ್ಯರು ಎಲ್ಲರೊಡನೆಯೂ ಕಪಟವಿಲ್ಲದೆ ಮಾತಾಡ ಬಲ್ಲವನಾಗಿದ್ದನೇ? ವಿಷಾದವೆಂದರೆ, ಅವನ ಸಾವಿನ ದಿನವೂ ನನಗೆ ಗೊತ್ತಾಗಲಿಲ್ಲವಲ್ಲ!

ಆಗಲೇ ಹತ್ತು ಗಂಟೆಯಾಯಿತು. ಸ್ನಾನ ಮಾಡಬೇಕು. ಈ ದಿನ ಹತ್ತನೆಯ ದಿನ ಗುರುವಾರವಲ್ಲವೆ? ನಾಗಣ್ಣನ ನೆನಪನ್ನು ಜಾರಿಸಿ ಬಿಡುವಂತೆ ತಲೆಗೆ ನೀರು ಹಾಕಿಕೊಂಡು ಬಿಡಬೇಕು. ಕಣ್ಣಂಚಿನ ನೀರು ಸ್ನಾನದ ನೀರಿನ ಜೊತೆಯೇ ಹರಿದು ಹೋಗಿ ಬಿಡಬೇಕು. ನಾನು ಅತ್ತದ್ದು ಯಾರಿಗೂ ಕಾಣಿಸಲೇಬಾರದು.

ಕನ್ನಡಿಯ ಮುಂದೆ ನಿಂತಾಗ ಯಾಕೋ ನನ್ನ ಬಲಗಣ್ಣು, ಬಲ ಮೂಗು, ಕೆನ್ನೆ ಎಲ್ಲ ನಾಗಣ್ಣನ ತರವೇ ಕಾಣಿಸಿತು. ಅವನ ಹಾಗೆಯೇ ಹಿಂದೆ ಸರಿಯುತ್ತಿದ್ದ ತಲೆಗೂದಲು, ಕಾಡುವ ಕಣ್ಣುಗಳು. ಒಂದೇ ವ್ಯತ್ಯಾಸ, ಈ ಕಣ್ಣುಗಳಲ್ಲಿ ಪ್ರಪಂಚವನ್ನು ಒಳಗೊಳ್ಳುವ ಮುಗ್ಧತೆಯೇ ಇರಲಿಲ್ಲ.

ಕನ್ನಡಿಯನ್ನು ಇನ್ನಷ್ಟು ಹತ್ತಿರ ಹಿಡಿದುಕೊಂಡೆ. ಥೇಟ್ ನಾಗಣ್ಣನೇ! ಅವನಿಗೆ ಎಷ್ಟಾಗಿತ್ತು ವಯಸ್ಸು? ಎಂಬತ್ತನಾಲ್ಕು? ಅಪ್ಪ ಸತ್ತಾಗ ಎಪ್ಪತ್ತೈದು, ಅಮ್ಮ ಹೋದಾಗ ಎಪ್ಪತ್ತೊಂದು.

ಕನ್ನಡಿಯಲ್ಲಿ ನಾನು ನಾಗಣ್ಣನಾಗಿಯೇ ಕಾಣುತ್ತಿದ್ದೆ. ಅದೇ ಕೃಷ್ಣ ದೇಹ. ಎದ್ದು ಕಾಣುತ್ತಿರುವ ಭುಜದ ಮೂಳೆಗಳು. ಎದೆಯ ತುಂಬೆಲ್ಲ ಬಿಳಿ ಕೂದಲು. ನನಗೂ ಈಗ ಅರವತ್ತೆರಡಾಯಿತಲ್ಲವೆ? ಅಬ್ಬಬ್ಬಾ ಎಂದರೆ ಇನ್ನೊಂದು ಹತ್ತರಿಂದ ಹನ್ನೆರಡು ವರ್ಷ ಅಷ್ಟೆ.

ಮಹಾ ಪ್ರಸ್ಥಾನಕ್ಕೆ ಮನವನ್ನು ಸಜ್ಜುಗೊಳಿಸುತ್ತಿದ್ದ ಹಾಗೆಯೇ, ಕನ್ನಡಿಯ ತುಂಬೆಲ್ಲ ನಾಗಣ್ಣನ ಮುಗ್ಧ ಮುಗುಳು ನಗೆಯ ಅಪಾರ ಪ್ರೇಮದ ರೂಪವೇ ಕಂಗೊಳಿಸಲಾರಂಭಿಸಿತು.


## ಎನ್.ಪಿ. ಮಂಜುನಾಥ್

ತುಮಕೂರಿನಲ್ಲಿ ನೆಲೆಸಿರುವ ಕತೆಗಾರರು ಆ ಸೀಮೆಯ ಬದುಕನ್ನು ತಮ್ಮ ಕತೆಗಳಲ್ಲಿ ಚಿತ್ರಿಸಿದ್ದಾರೆ. 'ಪ್ರಜಾವಾಣಿ', 'ಸುಧಾ' ಹಾಗೂ 'ಮಯೂರ'ಗಳಲ್ಲಿ ಅವರ ಸುಮಾರು 30ಕ್ಕೂ ಹೆಚ್ಚು ಕತೆಗಳು ಪ್ರಕಟವಾಗಿವೆ. 'ಭಗೀರಥ' ಎಂಬ ಕತೆ 'ಮಯೂರ'ದಲ್ಲಿ ಈ ಹಿಂದೆ ತಿಂಗಳ ಕತೆಯಾಗಿ ಪ್ರಕಟವಾಗಿತ್ತು.